* * *

ಇದೆಲ್ಲವೂ ಘಟಿಸಿ ಹೋಗಿ ನಾಕಾರು ತಿಂಳುಗಳೇ ಆಗಿದ್ದವು. ಮಾಯಾ ಕಾಲೇಜನ್ನು ತೊರೆದು ಮನೆ ಸೇರಿಕೊಂಡವಳು ಇದುವರೆಗೂ ಹೊರಗೆ ಬಂದಿರಲಿಲ್ಲ. ಪಂಚಯ್ಯಸ್ವಾಮಿಗಳಿಗಂತೂ ಈ ಘಟನೆಯೇ ಮರೆತು ಹೋದಂತಾಗಿತ್ತು. ಆದರೆ ಅದರ ಗಾಯ ಮಾತ್ರ ಎದೆಯೊಳಗೆ ಇನ್ನೂ ಹಸಿಯಾಗಿಯೇ ಇತ್ತು. ಆ ನೋವನ್ನು ಅದುಮಿಟ್ಟುಕೊಂಡೇ ಅವರು ಮುಂದೆ ಬರಲಿರುವ ಶ್ರಾವಣ ಮಾಸದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಸಹ ನಡೆಸಿಕೊಡಲಿರುವ 'ಬಸವ ಪುರಾಣ'ಕ್ಕೆ ತಯಾರಿ ಮಾಡಿಕೊಳ್ಳುತ್ತಿದ್ದರು. ಹಾಗೆಯೇ, ಅದಕ್ಕೆ ಪೂರಕವಾದ ಹೊಸ ವಿಚಾರಗಳನ್ನು ಪಟ್ಟಿ ಮಾಡಿಕೊಳ್ಳುತ್ತಿದ್ದರು. ಈ ಕಾರ್ಯಕ್ರಮದ ಮೊದಲ ದಿನದ ಉದ್ಘಾಟನಾ ಸಮಾರಂಭಕ್ಕೆ ಆಡಳಿತಾರೂಢ ಪಕ್ಷದಲ್ಲಿ ಮಂತ್ರಿಯಾಗಿರುವ ಈ ಕ್ಷೇತ್ರದ ಎಂ ಎಲ್ ಎ ಶರಣಪ್ಪ ಅತಿಥಿಯಾಗಿ ಆಗಮಿಸಲಿದ್ದರು. ಹೀಗೆ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದ್ದು ಏನೂ ಆಗಲಿಕ್ಕಿಲ್ಲ ಎಂಬ ಧೈರ್ಯದಲ್ಲಿ ಪಂಚಯ್ಯಸ್ವಾಮಿಗಳು ಇರುವಾಗಲೇ ದುರಂತವೊಂದು ಸಂಭವಿಸಿತು. ಗಂಗಾಧರಯ್ಯಸ್ವಾಮಿಗಳ ಕಾಲದಿಂದಲೂ ಮಠಕ್ಕೆ ನಡೆದುಕೊಳ್ಳುತ್ತಿದ್ದ ಮಾಯಾಳ ಆಯಿ ತಳವಾರ ಭೀಮವ್ವ ಉರುಲ್ಹಾಕ್ಕೊಂಡು ಸತ್ತು ಹೋದ ಸುದ್ದಿ ಬರಸಿಡಿಲಿನಂತೆ ಅವರಿಗೆ ಬಂದೆರಗಿತು! ಜೊತೆಗೆ ಅವಳ ಸಾವಿಗೆ ಕದ್ದು ಬಸುರಿಯಾದ ಮಾಯಾಳೇ ಕಾರಣ ಎಂಬ ಇನ್ನೊಂದು ಸುದ್ದಿಯೂ ಸಹ ಆ ಸುದ್ದಿಯೊಂದಿಗೆ ಹರಿದಾಡತೊಡಗಿತ್ತು. ಈ ಸುದ್ದಿಗಳನ್ನು ಕೇಳಿದ ಮೇಲಂತೂ ಅವರ ಜಂಘಾಬಲವೇ ಉಡುಗಿ ಹೋಗಿತ್ತು. ಇದರಿಂದ ಕಂಗಾಲಾಗಿ ಹೋಗಿದ್ದರು. ಆದರೂ ತಮ್ಮಷ್ಟಕ್ಕೆ ತಾವೇ ಸುಧಾರಿಸಿಕೊಂಡು ಏನೂ ಆಗಿಲ್ಲವೆಂಬಂತಿದ್ದರು. ಇನ್ನೇನು ಈ ಶ್ರಾವಣ ಮಾಸದ 'ಬಸವ ಪುರಾಣ ' ಹೇಳುವ ಕಾರ್ಯಕ್ರಮ ಮುಗಿದ ಮೇಲೆ ಎಲ್ಲವನ್ನೂ ಸರಿಪಡಿಸಿಕೊಳ್ಳಬೇಕೆಂದುಕೊಂಡಿದ್ದರು.

ಆದರೆ, ನಿನ್ನೆ ದಿನ ರಾತ್ರಿ ಮಲಗುವ ಹೊತ್ತಿಗೆ ಮಠದಲ್ಲಿ ಗಂಗಾಧರಯ್ಯಸ್ವಾಮಿಗಳ ಗದ್ದುಗೆ ಪೂಜೆ ಮಾಡುತ್ತಿದ್ದ ಕಲ್ಲಯ್ಯಸ್ವಾಮಿ ವಿಶ್ರಾಂತಿ ಕೋಣೆಗೆ ಬಂದು, 'ಅಪ್ಪಗೋಳ, ಘಾತ ಆಗೆದ! ಊರಾಗಿನ ಜನ್ರು ಮಠದ ವಿಚಾರದಾಗ ಏನಕೇನರೆ ಗುಸುಗುಸು ಅಂತ ತಮ್ಮೊಳಗನs ಮಾತಾಡ್ಕೊಳ್ಳಾಕತ್ತ್ಯಾರು! ನನ್ನ ಬಾಯಿಂದ ಅದನ್ನೆಲ್ಲ ಹೆಂಗ ಹೇಳಲ್ರಿ!? ನನ್ಗ ಏನೂ ತಿಳೀವಲ್ದಾಗೇದ! ಯಾಕಂದ್ರ, ತಳವಾರ ಭೀಮವ್ವನ ಮೊಮ್ಮಗಳು ಮಾಯಾ ಕದ್ದು ಹೊಟ್ಟೀಲೆ ನಿಲ್ಲಾಕ ನೀವs ಕಾರಣಂತ ತಳವಾರ ಓಣ್ಯಾಗಿನ ಮಂದಿ ಗುಸು ಗುಸು ಮಾತಾಡಕತ್ತ್ಯಾರು!...' ಎಂದು ಸಣ್ಣ ದನಿಯಲ್ಲಿ ಹೇಳಿ ಹೋದಾಗಿನಿಂದ ಅವರು ಮತ್ತೇ ದಿಕ್ಕುಗೇಡಿಯಂತಾಗಿದ್ದರು.

'ಲೊಚ್... ಲೊಚ್...' ಎಂದು ಗೋಡೆಯ ಮೇಲಿನ



ಹಲ್ಲಿ ಸದ್ದು ಮಾಡಿದಾಗ ತಟ್ಟನೆ ವಾಸ್ತವಕ್ಕೆ ಬಂದ ಪಂಚಯ್ಯಸ್ವಾಮಿಗಳು ದೀರ್ಘವಾದ ನಿಟ್ಟುಸಿರು ಬಿಟ್ಟು ಕಿಟಕಿಯತ್ತ ನೋಡಿದರು. ಹೊರಗೆ ಕತ್ತಲು ಆವರಿಸಿತ್ತು. ಮಠದ ಆವರಣದಲ್ಲಿ ಅಲ್ಲಲ್ಲಿ ಹಾಕಲಾಗಿದ್ದ ನಿಯಾನ್ ಬಲ್ಬುಗಳು ಹಾಲಿನಂಥ ಬೆಳಕು ಚೆಲ್ಲಿದ್ದವು. ವೇದಿಕೆಯ ಮುಂದೆ ಸೇರಿದ್ದ ಜನರ ಗದ್ದಲ ದೂರದವರೆಗೂ ಕೇಳಿಸುತ್ತಿತ್ತು. ಈ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಲಿದ್ದ ಮಂತ್ರಿ ಶರಣಪ್ಪ ಅದಾಗಲೇ ಬಂದು ವೇದಿಕೆಯ ಮುಂದೆ ಹಾಕಲಾಗಿದ್ದ ಕುರ್ಚಿಯ ಮೇಲೆ ಕುಂತು ಜನರೊಂದಿಗೆ ಮಾತಿಗಿಳಿದಿದ್ದರು. ಕಾರ್ಯಕ್ರಮ